# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ).

ನಿಗಮ ಕಾರ್ಯಾಲಯ,
CIN : U40109KA2004SGC035177
ವಿಜಯನಗರ 2ನೇ ಹಂತ, ಹಿನಕಲ್, ಮೈಸೂರು–17.
Website : www.cescmysore.org

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರ ಕಛೇರಿ,
ಕಾರ್ಯ ಮತ್ತು ಪಾಲನೆ ಜ್ಯೋತಿನಗರ, ಉಪ–ವಿಭಾಗ,
ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ : 0821-2450020


ಕ್ರ.ಸಂ. : ಸ.ಕಾ.ನಿ.ಇಂ.(ವಿ)/ಜ್ಯೋತಿನಗರ/17–18/ 4033 ದಿನಾಂಕ : 17–11–2017 20

## ಜನಸಂಪರ್ಕ ಸಭಾ ನಡಾವಳಿ

ದಿನಾಂಕ 14–11–2017 ರಂದು ಮಧ್ಯಾಹ್ನ 3.00 ಗಂಟೆಗೆ ಜ್ಯೋತಿನಗರ ಉಪವಿಭಾಗದಲ್ಲಿ ಶ್ರೀ ನರಸಿಂಹೇಗೌಡ, ಅಧೀಕ್ಷಕ ಇಂಜಿನಿಯರ್ (ವಿ), ಸೆಸ್ಕ್, ಮೈಸೂರುರವರ ಅಧ್ಯಕ್ಷತೆಯಲ್ಲಿ ಜನಸಂಪರ್ಕ ಸಭೆ ನಡೆಸಲಾಗಿರುತ್ತದೆ.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ ಗ್ರಾಹಕರ ವಿವರ :**

| ಕ್ರ.ಸಂ. | ಅಧಿಕಾರಿ/ನೌಕರರ ಹೆಸರು | ಪದನಾಮ | ಉಪ ವಿಭಾಗ/ ಶಾಖೆಯ ಹೆಸರು |
|---|---|---|---|
| 1 | ಸೋಮಶೇಖರ್. ಎಂ.ಕೆ | ಕಾ.ನಿ.ಇಂ(ವಿ), | ಎನ್.ಆರ್.ಮೊಹಲ್ಲಾ ವಿಭಾಗ |
| 2 | ನಂದೀಶ್. ಎಂ.ಎಸ್ | ಸ.ಕಾ.ನಿ.ಇಂ(ವಿ), | ಜ್ಯೋತಿನಗರ ಉಪ ವಿಭಾಗ |
| 3 | ಜಮೀರ್ ಪಾಷ | ಸ.ಇಂ(ತಾಂ), | ಜ್ಯೋತಿನಗರ ಉಪ ವಿಭಾಗ |
| 4 | ಎನ್. ಸೋಮಶೇಖರ್ | ಸ.ಇಂ(ವಿ), | ಜ್ಯೋತಿನಗರ ಶಾಖೆ |
| 5 | ಆರ್.ಶ್ರೀ ಹರ್ಷ | ಕಿ.ಇಂ(ವಿ), | ಜ್ಯೋತಿನಗರ ಶಾಖೆ |
| 6 | ಸ್ವಾಮಿ.ಸಿ | ಸ.ಇಂ(ವಿ), | ಉದಯಗಿರಿ ಶಾಖೆ |
| 7 | ತಿಮ್ಮರಾಜು. ಕೆ.ಟಿ | ಕಿ.ಇಂ(ವಿ), | ಉದಯಗಿರಿ ಶಾಖೆ |
| 8 | ಉಮೇಶ.ಜಿ | ಕಿ.ಇಂ(ವಿ), | ಶಾಂತಿನಗರ ಶಾಖೆ |
| 9 | ಮೊಹಮ್ಮದ್ ಅಲೀಮುಲ್ಲಾ ಷರೀಫ್, | – | ಗ್ರಾಹಕರು |
| 10 | ಕೃಷ್ಣಪ್ಪ | – | ಗ್ರಾಹಕರು |
| 11 | ಸಿ.ಆರ್.ಅಶ್ವಥ್ ನಾರಾಯಣ | – | ಗ್ರಾಹಕರು |
| 13 | ವಾಹಿದ್ಉಲ್ಲಾಖಾನ್ | – | ಗ್ರಾಹಕರು |
| 14 | ಮೊಹಮ್ಮದ್ ಅಖ್ತರ್ | | ಗ್ರಾಹಕರು |
| 15 | ಮುನವ್ವರ್ | | ಗ್ರಾಹಕರು |
| 16 | ರೇಷ್ಮ. ಎಸ್ | | ಗ್ರಾಹಕರು |
| 17 | ವಿಜಯಲಕ್ಷ್ಮಿ | – | ಗ್ರಾಹಕರು |

ಸಭೆಯಲ್ಲಿ ಚರ್ಚಿಸಿದ ವಿಷಯಗಳು ಈ ಕೆಳಕಂಡಂತಿವೆ.

ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಮೈಸೂರುರವರು ಜನಸಂಪರ್ಕ ಸಭೆಗೆ ಎಲ್ಲರನ್ನೂ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು ಹಾಗೂ ಸಭೆಗೆ ಆಗಮಿಸಿದ ಗ್ರಾಹಕರುಗಳ ಮನವಿಗೆ ಈ ಕೆಳಕಂಡಂತೆ ಉತ್ತರಿಸಲಾಗಿರುತ್ತದೆ.

**ಶ್ರೀ ಮೊಹಮ್ಮದ್ ಅಲೀಮುಲ್ಲಾ ಷರೀಫ್, ಶಾಂತಿನಗರ, ಮೈಸೂರುರವರ ಮನವಿ :**

1) ಮಹದೇವಪುರ ಮುಖ್ಯ ರಸ್ತೆ (ಶಾಂತಿನಗರ) ಅಗಲೀಕರಣ ಮಾಡುವಾಗ ಮನೆಗಳನ್ನು ನೆಲಸಮ ಮಾಡಲು ಮತ್ತು ವಿದ್ಯುತ್ ಮೀಟರ್‌ಗಳನ್ನು ತೆಗೆಯುವ ಸಂಬಂಧ ಮಾಹಿತಿಯನ್ನು ಕೋರಿರುತ್ತಾರೆ.

ರಸ್ತೆ ಅಗಲೀಕರಣಕ್ಕೆ ಸಂಬಂಧಪಟ್ಟ ಇಲಾಖೆಯಿಂದ ಎಸ್ಟಿಮೇಟ್ ಆದ ನಂತರ ಅವರೇ ಕಾಮಗಾರಿಯನ್ನು ಮಾಡುತ್ತಾರೆ ಹಾಗೂ ಮನೆಗಳ ವಿದ್ಯುತ್ ಮಾಪಕಗಳನ್ನು ತೆಗೆಯಲು ಸಂಬಂಧಪಟ್ಟ ಗ್ರಾಹಕರು ಅರ್ಜಿ ನೀಡಿದ್ದರೆ ನಿಗಮದ ನಿಯಮಾನುಸಾರ ವಿದ್ಯುತ್ ಸಂಪರ್ಕವನ್ನು ಶಾಶ್ವತವಾಗಿ ತೆಗೆಯಲಾಗುವುದು.

**ಶ್ರೀ ಕೃಷ್ಣಪ್ಪ, ಗಾಯತ್ರಿಪುರಂ, ಮೈಸೂರುರವರ ಮನವಿ :**

1) ಮೈಸೂರಿನ ಗಾಯತ್ರಿಪುರಂ ನಲ್ಲಿರುವ ಮನೆ ಹಾಗೂ ಫ್ಲೋರ್ ಮಿಲ್‌ನ ಖಾತೆ ಬದಲಾವಣೆ ಮಾಡಲು ಕೋರಿರುತ್ತಾರೆ.

ಆಸ್ತಿಗೆ ಸಂಬಂಧಪಟ್ಟ ದಾಖಲಾತಿಗಳು, ಹಾಗೂ ನಗರಪಾಲಿಕೆಯಿಂದ ಫ್ಲೋರ್ ಮಿಲ್ಲನ್ನು ನಡೆಸಲು ಉದ್ದಿಮೆ ಪರವಾನಗಿಯನ್ನು ನೀಡಿದ್ದರೆ ಹೆಸರು ಬದಲಾವಣೆ ಮಾಡಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ.

**ಶ್ರೀ ಸಿ.ಆರ್.ಅಶ್ವಥ್ ನಾರಾಯಣ, ವಿದ್ಯುತ್ ಗುತ್ತಿಗೆದಾರರು, ಮೈಸೂರುರವರ ಮನವಿ :**

1) ಕುಮಾರ್ ಎಂ, ನಂ 231, 6ನೇ ಕ್ರಾಸ್, ವಿದ್ಯಾನಗರ, ಮೈಸೂರುರವರ ಹೆಸರು ಬದಲಾವಣೆ ಮಾಡಲು ಈಗಾಗಲೇ ದಾಖಲಾತಿಗಳನ್ನು ನೀಡಲಾಗಿದ್ದರೂ ಇದುವರೆವಿಗೂ ಮಾಡಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಸದರಿ ವಿಷಯವಾಗಿ ಈ ಕಛೇರಿಯ ಪತ್ರ ಸಂಖ್ಯೆ:3132 ದಿನಾಂಕ 03.01.2017 ರಲ್ಲಿ ಸದರಿ ಸ್ಥಾವರವು ರೆವಿನ್ಯೂ ಬಡಾವಣೆಯಾಗಿರುವುದರಿಂದ ಕೆಲವು ದಾಖಲಾತಿಗಳನ್ನು ಒದಗಿಸಿದ ನಂತರ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಲಾಗಿರುತ್ತದೆ. ಅದರಂತೆ ದಾಖಲಾತಿಗಳನ್ನು ಒದಗಿಸಿದ್ದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಸ.ಕಾ.ನಿ.ಇಂ(ವಿ) ರವರು ತಿಳಿಸಿರುತ್ತಾರೆ.

**ಶ್ರೀ ವಾಹಿದ್‌ಉಲ್ಲಾಖಾನ್, ವಿದ್ಯುತ್ ಗುತ್ತಿಗೆದಾರರು, ಬೀಡಿಕಾಲೋನಿ, ಮೈಸೂರುರವರ ಮನವಿ :**

1) ತಾತ್ಕಲಿಕ ಸ್ಥಾವರಗಳಿಗೆ ವಾರದ ಬಿಲ್ಲುಗಳನ್ನು ವಿತರಿಸುತ್ತಿಲ್ಲ ಕಾರಣ 28 ದಿನಗಳ ನಂತರ ನವೀಕರಣ ಮಾಡುವಾಗ ಕಷ್ಟವಾಗಿರುತ್ತದೆ ಎಂದು ತಿಳಿಸಿರುತ್ತಾರೆ

ತಾತ್ಕಲಿಕ ಸ್ಥಾವರಗಳ ರೀಡಿಂಗನ್ನು ಪ್ರತಿ ವಾರ ಪಡೆದು ಕಂದಾಯಶಾಖೆಗೆ ನೀಡುವಂತೆ ಸಂಬಂಧಿಸಿದ ಶಾಖಾಧಿಕಾರಿಗಳಿಗೆ ಸೂಚಿಸಿರುತ್ತಾರೆ

**ಶ್ರೀಮತಿ ರೇಷ್ಮ. ಎಸ್ ಮೈಸೂರುರವರ ಮನವಿ :**

1) ಅಜೀಜ್ ಸೇಠ್ ನಗರದ ಮನೆ ಸಂಖ್ಯೆ 895ರ ಮನೆಗೆ ಹೊಂದಿಕೊಂಡಂತಿರುವ ಕಂಬವನ್ನು ಸ್ಥಳಾಂತರ ಮಾಡಲು ಕೋರಿರುತ್ತಾರೆ.

ಶಾಂತಿನಗರ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

**ಶ್ರೀಮತಿ ವಿಜಯಲಕ್ಷ್ಮಿ, ಮೈಸೂರುರವರ ಮನವಿ :**

1) ಕ್ಯಾತಮಾರನಹಳ್ಳಿಯ ಮನೆ ಸಂಖ್ಯೆ 98/1 ರ ಪ್ರಕಾಶ್ ಎಂಬುವವರ ಮನೆಗೆ ಹೊಂದಿಕೊಂಡಂತಿರುವ ಕಂಬವನ್ನು ರಸ್ತೆಯ ಕಡೆಗೆ ಸ್ಥಳಾಂತರ ಮಾಡಲು ಕೋರಿರುತ್ತಾರೆ.

ಈ ವಿಷಯವಾಗಿ ಪ್ರಕಾಶ್ ರವರಿಗೆ ಕಂಬಸ್ಥಳಾಂತರಿಸಲು ಈ ಕಛೇರಿಗೆ ಅರ್ಜಿ ನೀಡಲು ತಿಳಿಸಲಾಗಿದ್ದು, ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿಯಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಿ ಮುಂದಿನ ಕ್ರಮ ಕೈಗೊಳ್ಳುವಂತೆ ಶಾಂತಿನಗರ ಶಾಖಾಧಿಕಾರಿಯವರಿಗೆ ಸೂಚಿಸಲಾಗಿದೆ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನೆ ಉಪ ವಿಭಾಗ,
ಜ್ಯೋತಿನಗರ ಮೈಸೂರು.

ಪ್ರತಿಯನ್ನು :

1. ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಚಾ.ವಿ.ಸ.ನಿ.ನಿ., ಮೈಸೂರುರವರ ಅವಗಾಹನೆಗೆ ಸಲ್ಲಿಸಲಾಗಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎನ್.ಆರ್.ಮೊಹಲ್ಲಾ ವಿಭಾಗ, ಚಾ.ವಿ.ಸ.ನಿ.ನಿ., ಮೈಸೂರುರವರ ಅವಗಾಹನೆಗೆ ಸಲ್ಲಿಸಲಾಗಿದೆ.
3. ಸಹಾಯಕ ಇಂಜಿನಿಯರ್(ವಿ), ಜ್ಯೋತಿನಗರ/ಶಾಂತಿನಗರ/ಉದಯಗಿರಿ
4. ಸಲೇಅ/ಕಡತ